# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ನಾಗೇಶ್, ನಿವೃತ್ತ ಕಾರ್ಯದರ್ಶಿ, ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ– ಅಂತಿಮ ಆದೇಶ ಹೊರಡಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 584 ಗ್ರಾಪಂಕಾ 2018, ದಿನಾಂಕ:17.01.2019.
2. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:4392/2019 ರಲ್ಲಿ ನೀಡಿರುವ ಆದೇಶ ದಿನಾಂಕ:29.07.2019.
3. ಅಪರ ನಿಬಂಧಕರು ವಿಚಾರಣೆಗಳು–13, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತ ರವರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: UPLOK-2/DE/44/2019/ARE-13, ದಿನಾಂಕ:29.12.2021.
4. ಮಾನ್ಯ ಉಪಲೋಕಾಯುಕ್ತ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: UPLOK-2/DE/44/2019/ARE-13,ದಿನಾಂಕ:07.01.2022.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಶ್ರೀ ನಾಗೇಶ್, ನಿವೃತ್ತ ಕಾರ್ಯದರ್ಶಿ, ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ವಿರುದ್ಧ 2010–2011ನೇ ಸಾಲಿನಲ್ಲಿ ಶ್ರೀಯುತ ಕುಮಾರ್ ಬಿನ್ ನಿಂಗಣ್ಣ ರವರು ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದು, ಎಂ.ಜಿ.ಎನ್.ಆರ್.ಇಜಿ ಯೋಜನೆಯಡಿ ಅವಕಾಶವಿಲ್ಲದಿದ್ದರೂ ಗುತ್ತಿಗೆದಾರರಂತೆ ಸದರಿಯವರಿಗೆ ಉದ್ಬೂರು ಗ್ರಾಮದಲ್ಲಿ ಚಿಕ್ಕಕೆರೆ ಕಾಮಗಾರಿಯನ್ನು ನಿರ್ವಹಿಸಲು ನೀಡಿ, ಅದರ ಸಾಮಗ್ರಿ ಮೊತ್ತ ರೂ. 59,040/– ರೂ.ಗಳನ್ನು ನಿಯಮಬಾಹಿರವಾಗಿ ನೀಡಿರುವ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು "ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957" ರ ನಿಯಮ 14(ಎ) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿದೆ.

ಶ್ರೀ ನಾಗೇಶ್, ನಿವೃತ್ತ ಕಾರ್ಯದರ್ಶಿ, ಇವರ ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಗೆ ವಹಿಸಿದ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 584 ಗ್ರಾಪಂಕಾ 2018, ದಿನಾಂಕ:17.01.2019 ನ್ನು ಪ್ರಶ್ನಿಸಿ ಆಪಾದಿತ ಸರ್ಕಾರಿ ನೌಕರರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ಇಲ್ಲಿ ಅರ್ಜಿ ಸಂಖ್ಯೆ:4392/2019 ಅನ್ನು ದಾಖಲಿಸಿರುತ್ತಾರೆ. ಈ ಪ್ರಕರಣದ ವಿಚಾರಣೆ ನಡೆಸಿ ಮಾನ್ಯ ನ್ಯಾಯ ಮಂಡಳಿಯು ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಈ ಕೆಳಕಂಡಂತೆ ಆದೇಶಿಸಿರುತ್ತದೆ:–

> Hence, the Application is allowed. The impugned order bearing ಗ್ರಾಅಪ 584 ಗ್ರಾಪಂಕಾ 2018, ದಿನಾಂಕ:17.01.2019 (Annexure-A4) passed by the 1st respondent entrusting the matter to the Lokayukta is hereby set aside.

...2

Consequently, the charge memo charge dated No.ಉಪಲೋಕ್-2 /ಡಿಇ/44/2019/ಅನಿವಿ-13, ದಿನಾಂಕ:29.12.2021(Annexure-A5) issued by the 2nd respondent 02.03.2019 also set aside. However, liberty is given to the 1st respondent to initiate fresh proceedings as against the applicant herein, if permitted under laws

ಮಾನ್ಯ ಕರ್ನಾಟಕ ನ್ಯಾಯಮಂಡಳಿ, ಬೆಂಗಳೂರು ಇವರ ಆದೇಶದಂತೆ ಅಪರ ನಿಬಂಧಕರು ವಿಚಾರಣೆಗಳು-13, ಕರ್ನಾಟಕ ಲೋಕಾಯುಕ್ತ ರವರು ಈ ಪ್ರಕರಣದ ಕುರಿತು ಮೇಲೆ ಓದಲಾದ (3)ರ ವರದಿಯನ್ನು ಮಾನ್ಯ ಉಪಲೋಕಾಯುಕ್ತ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ಸಲ್ಲಿಸಿರುತ್ತಾರೆ. ಸದರಿ ವರದಿಯ ಅನುಸಾರ ಮಾನ್ಯ ಉಪಲೋಕಾಯುಕ್ತ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಸಲ್ಲಿಸಿರುತ್ತಾರೆ.

*On re-consideration of report of the inquiry officer and taking note of the totality of the circumstances of the case, I do not find any reason to interfere with the conclusion reached by the Inquiry Officer.*

*It is hereby recommended to the Government to accept the report of Inquiry Officer and to close further proceedings against DGO Sri S.Nagesh, Retired Secretary, Panchayath, Mysuru Taluk and District.*

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ನಾಗೇಶ್, ನಿವೃತ್ತ ಕಾರ್ಯದರ್ಶಿ, ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ವಿರುದ್ಧದ ಶಿಸ್ತು ನಡವಳಿಗಳನ್ನು ಮುಕ್ತಾಯಗೊಳಿಸಲು ಸರ್ಕಾರವು ನಿರ್ಣಯಿಸಿ, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 17 ಗ್ರಾಪಂಕಾ 2022,**
**ಬೆಂಗಳೂರು, ದಿನಾಂಕ:23.05.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ನಾಗೇಶ್, ನಿವೃತ್ತ ಕಾರ್ಯದರ್ಶಿ, ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ವಿರುದ್ಧದ ಶಿಸ್ತು ನಡವಳಿಗಳನ್ನು ಮುಕ್ತಾಯಗೂಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
ಎಂ.ಎಂ. 23/5/22
(ಎಂ.ಎಂ.ರಾಜು.)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ(ಜಿ.ಪಂ).

**ಗೆ,**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

...3

3. ಅಪರ ನಿಬಂಧಕರು, ವಿಚಾರಣೆಗಳು-13, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ ಕೆ.ಜಿ. ರಸ್ತೆ, ಬೆಂಗಳೂರು-09.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮೈಸೂರು ಜಿಲ್ಲೆ.
7. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ
8. ಶ್ರೀ ನಾಗೇಶ್, ನಿವೃತ್ತ ಕಾರ್ಯದರ್ಶಿ, ಉದ್ಬೂರು ಗ್ರಾಮ ಪಂಚಾಯಿತಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ
9. ಗಣಕ ಕೋಶ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.